

*'ದೇವರ ಸಾಕ್ಷಾತ್ಕಾರಕ್ಕೆ ಅತ್ಯುತ್ತಮ ಸ್ಥಳ ಉದ್ಯಾನ'*
*-ಜಾರ್ಜ್ ಬರ್ನಾರ್ಡ್ ಶಾ*

ದೇವರನ್ನು ಹುಡುಕುತ್ತಾ ನಾವು ಪ್ರಾರ್ಥನಾ ಸ್ಥಳಗಳನ್ನು ಕಟ್ಟಿಕೊಂಡೆವು. ಆದರೆ, ಕಲ್ಲುಮಣ್ಣಿನ ಮಂದಿರ ಮಸೀದಿ ಇಗರ್ಜಿಗಳ ನಡುವೆ ಪ್ರಕೃತಿಸಹಜ ಮಂದಿರಗಳನ್ನು ನಿರ್ಲಕ್ಷಿಸಿದೆವು. ಈ ಸೂಕ್ಷ್ಮವನ್ನು ಐರಿಷ್ ಬರಹಗಾರ–ದಾರ್ಶನಿಕ ಬರ್ನಾರ್ಡ್ ಶಾ ಅವರ ಮಾತು ನೆನಪಿಸುವಂತಿದೆ. 'ದೇವರ ಸಾಕ್ಷಾತ್ಕಾರಕ್ಕೆ ಉದ್ಯಾನ ಅತ್ಯುತ್ತಮ ಸ್ಥಳ' ಎನ್ನುವ ಕವಿದರ್ಶನದಲ್ಲಿ ದೊಡ್ಡದೊಂದು ಜೀವನಪಾಠವೇ ಇದೆ. ಏನದು ಜೀವನಪಾಠ?

ದೇವರ ಆಕಾರ ಯಾವುದು? ನಿರಾಕಾರ ಎನ್ನುತ್ತಾರೆ ಅನುಭಾವಿಗಳು. 'ನಮ್ಮ ಅಳತೆಯನ್ನು ಮೀರಲಾರದ ದೇವರು' ಎನ್ನುವ ಶಿವರಾಮ ಕಾರಂತರು, ನಮ್ಮ ಕಲ್ಪನೆ ಹಾಗೂ ಅನುಭವಗಳ ಮಿತಿಯನ್ನು ದೇವರಿಗೂ ಕಲ್ಪಿಸಿದ್ದಾರೆ. ದೇವರ ಕುರಿತಂತೆ ನಮ್ಮ ಜನಪದದಲ್ಲಿ ಮತ್ತೊಂದು ಪರಿಕಲ್ಪನೆಯೂ ಇದೆ. ಅದು ಪ್ರಕೃತಿಯಲ್ಲಿ ದೈವವನ್ನು ಕಾಣುವುದು. ಪ್ರಕೃತಿ ಹಾಗೂ ದೈವ ನಮ್ಮ ಪೂರ್ವಸೂರಿಗಳ ಕಣ್ಣಿಗೆ ಬೇರೆ ಬೇರೆಯಾಗಿ ಕಾಣಿಸಿಯೇ ಇಲ್ಲ. ಕಾಡು ಮೇಡು ಗುಡ್ಡ ಎಲ್ಲವೂ ನಮಗೆ ದೈವಸ್ವರೂಪಿಯೇ. ಎಡವಿದಲ್ಲೆಲ್ಲ ದೈವದ ಸಾಕ್ಷಾತ್ಕಾರ! ಇದರರ್ಥ ಇಷ್ಟೇ: ಗಿಡಮರಗಳು ನಮ್ಮ ಕಣ್ಣಿಗೆ ಕಾಣುವ ದೇವರು. ಈ ಸಂಗತಿಯನ್ನು ಮತ್ತಷ್ಟು ಸರಳಗೊಳಿಸಿ ಹೇಳುವುದಾದರೆ, ಹಸಿರಿನ ರೂಪದಲ್ಲಿ ದೇವರು ನಮಗೆ ಕಾಣಿಸುತ್ತಿದ್ದಾನೆ ಎನ್ನಬಹುದು. ಈ ಹಿನ್ನೆಲೆಯಲ್ಲಿ, ಹಸಿರು ಉಸಿರಿನ ರೂಪವಾದ ಉದ್ಯಾನಗಳು ದೈವ ಸಾಕ್ಷಾತ್ಕಾರದ ತಾಣಗಳು ಎನ್ನುವ ಬರ್ನಾರ್ಡ್ ಶಾ ಅವರ ಮಾತನ್ನು ಗಮನಿಸಬೇಕು. ಮನುಷ್ಯ ಜೀವಿಸಲಿಕ್ಕೆ ಅಗತ್ಯವಾದ ಉಸಿರನ್ನು ನೀಡುವ ಹಸಿರನ್ನು ದೈವವೆನ್ನದೆ ಬೇರೆ ಯಾವುದನ್ನು ಆರಾಧಿಸಬೇಕು?

## ಕೈತೋಟ ಎನ್ನುವ ಕುಟುಂಬ

ನಾಗರಿಕತೆಯ ಉತ್ಪನ್ನಗಳಲ್ಲಿ ಉದ್ಯಾನಗಳೂ ಸೇರಿವೆಯಷ್ಟೇ. ಈ ಉದ್ಯಾನಗಳು ನಮ್ಮ ಸೌಂದರ್ಯಪ್ರಜ್ಞೆ ಹಾಗೂ ಪ್ರಕೃತಿಪ್ರೀತಿ ಎರಡನ್ನೂ ಮೇಳೈಸಿಕೊಂಡ ಅದ್ಭುತ ಕಲಾಕೃತಿಗಳು. ದೈವ ಸಾಕ್ಷಾತ್ಕಾರದ ಹಾದಿಯಲ್ಲಿ ಆಧುನಿಕ ಮನುಷ್ಯನಿಗೆ ಒದಗಿದ ಅದ್ಭುತ ದೀವಿಗೆಯ ರೂಪದಲ್ಲಿ ಉದ್ಯಾನಗಳನ್ನು ಕಾಣಬಹುದು. ಅಂದಹಾಗೆ, ಉದ್ಯಾನ ಸಾರ್ವತ್ರಿಕ ಸ್ಥಳವಷ್ಟೇ. ಅದನ್ನು ವೈಯಕ್ತಿಕವಾಗಿಸಿಕೊಳ್ಳುವುದು, ಖಾಸಗಿ ಮಾಡಿಕೊಳ್ಳುವುದು ಹೇಗೆ? ಈ ಚಿಂತನೆ–ಪ್ರಯತ್ನದಲ್ಲಿ ಚಿಗುರಿದ್ದು ಕೈತೋಟ! ಮನೆಯ ಅಂಗಳದಲ್ಲಿ, ಹಿತ್ತಲಲ್ಲಿ ರೂಪಿಸಿಕೊಳ್ಳಬಹುದಾದ ಕೈತೋಟಗಳು!

ಕೈತೋಟವನ್ನು ಮಾಡಿಕೊಳ್ಳುವುದೆಂದರೆ ಕುಟುಂಬವೊಂದನ್ನು ರೂಪಿಸಿಕೊಂಡಂತೆ. ಮತ್ತಷ್ಟು ಸ್ಪಷ್ಟವಾಗಿ ಹೇಳುವುದಾದರೆ, ಕುಟುಂಬದ ವಿಸ್ತರಣೆಯೇ ಕೈತೋಟ. ಕುಟುಂಬದ ಸದಸ್ಯರಿದ್ದಂತೆ ಉದ್ಯಾನದಲ್ಲಿನ ಸಸಿಗಳು. ಭಿನ್ನ ಅಭಿರುಚಿ ಹೊಂದಿದ್ದರೂ ಕುಟುಂಬದ ಸದಸ್ಯರು

